ಕಾಲೇಜು ಶಿಕ್ಷಣ ಇಲಾಖೆ
ಕರ್ನಾಟಕ ಸರ್ಕಾರ
Department of Collegiate Education
Government of Karnataka

ಸಂಖ್ಯೆ:ಕಾಶಿಇ/ಮಾತಂವಿ/13/HRMS/2015-16

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು.
ದಿನಾಂಕ: 21/09/2016.

**ಸುತ್ತೋಲೆ**

ವಿಷಯ:- ಸರ್ಕಾರಿ ನೌಕರರ ಮತ್ತು ಕುಟುಂಬ ಅವಲಂಬಿತ ಸದಸ್ಯರುಗಳ ಆಧಾರ್ ಸಂಖ್ಯೆಯನ್ನು ಮಾನವ ಸಂಪನ್ಮೂಲ ಯೋಜನೆ ತಂತ್ರಾಂಶದಲ್ಲಿ ಅಳವಡಿಸುವ ಬಗ್ಗೆ

ಉಲ್ಲೇಖ:- 1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, (ಇ-ಆಡಳಿತ), ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಸಿಆಸುಇ/97/ಇಆಇ/2015, ದಿನಾಂಕ:07/09/2016.
2) ಈ ಕಛೇರಿ ಸಮಸಂಖ್ಯೆಯ ಸುತ್ತೋಲೆ ದಿನಾಂಕ:23/11/2015.

*****

ಸರ್ಕಾರದ ಆದೇಶ ಹಾಗೂ ಸುತ್ತೋಲೆಗ ಅನ್ವಯ ಇಲಾಖೆಯ ಎಲ್ಲಾ ಬಟವಾಡೆ ಅಧಿಕಾರಿಗಳು ತಮ್ಮ ಅಧೀನದ ಸಿಬ್ಬಂದಿಯ ಹಾಗೂ ಅವರ ಕುಟುಂಬ ಅವಲಂಬಿತ ಸದಸ್ಯರುಗಳ ಆಧಾರ್ ಸಂಖ್ಯೆಯನ್ನು ಹೆಚ್.ಆರ್.ಎಂ.ಎಸ್.ನಲ್ಲಿ ದಾಖಲು ಮಾಡಲು ಈ ಹಿಂದೆಯೇ ಸೂಚಿಸದ್ದರೂ ಸಹ ಇದುವರೆವಿಗೆ ಆಧಾರ್ ಸಂಖ್ಯೆಯನ್ನು ನಮೂದಿಸಿರುವುದಿಲ್ಲ.

ಇದರಿಂದಾಗಿ ಜ್ಯೋತಿ ಸಂಜೀವಿನಿ ಯೋಜನೆಯ ಸಹಾಯ ಪಡೆಯುವಲ್ಲಿ ನೌಕರರು ವಂಚಿತರಾಗುತಿದ್ದು, ಮಾನವ ಸಂಪನ್ಮೂಲ ಯೋಜನೆ ತಂತ್ರಾಂಶದಲ್ಲಿ ನೌಕರರನ್ನು "ಆಧಾರ್" ಸಂಖ್ಯೆ ಮೂಲಕ ಗುರುತ್ತಿಸುವ ಪ್ರಯತ್ನಕ್ಕೆ ಹಿನ್ನಡೆಯಾಗುತ್ತಿರುವುದಾಗಿ ಉಲ್ಲೇಖ(1)ರ ಸರ್ಕಾರದ ಸುತ್ತೋಲೆಯಲ್ಲಿ ತಿಳಿಸಿ, ಅಕ್ಟೋಬರ್ 2016 ರೊಳಗಾಗಿ ಎಲ್ಲಾ ಬಟವಾಡೆ ಅಧಿಕಾರಿಗಳು ತಮ್ಮ ಅಧೀನದ ಸಿಬ್ಬಂದಿಯ ಹಾಗೂ ಅವರ ಕುಟುಂಬ ಅವಲಂಬಿತ ಸದಸ್ಯರುಗಳ ಆಧಾರ್ ಸಂಖ್ಯೆಯನ್ನು ಹೆಚ್.ಆರ್.ಎಂ.ಎಸ್.ನಲ್ಲಿ ದಾಖಲು ಮಾಡಲು ಸೂಚಿಸಲಾಗಿದೆ. ಸರ್ಕಾರದ ಸುತ್ತೋಲೆಯನ್ನು ಈ ಸುತ್ತೋಲೆಗೆ ಅನುಬಂಧಿಸಿದ್ದು, ಅದರಂತೆ ಕ್ರಮವಹಿಸಲು ಸೂಚಿಸಲಾಗಿದೆ. ಈ ವಿಷಯವನ್ನು ಅತ್ಯಂತ ಜರೂರು ಎಂದು ಪರಿಗಣಿಸುವುದು.

ಅಡಕ: ಸರ್ಕಾರದ ಸುತ್ತೋಲೆ

ಕಾಲೇಜು ಶಿಕ್ಷಣ ನಿರ್ದೇಶಕರು.

ಇವರಿಗೆ

1. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ
2. ಎಲ್ಲಾ ಸರ್ಕಾರಿ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಅಗತ್ಯ ಕ್ರಮಕ್ಕಾಗಿ
3. ಕಛೇರಿ ಪ್ರತಿ.

# ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 97 ಇಆಇ 2015

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ 07-09-2016

ಕಾರ್ಯ... ಆಯುಕ್ತರ
20 SEP 2016
ದಿನಾಂಕ ..........
HRMS

## ಸುತ್ತೋಲೆ

ವಿಷಯ: ಸರ್ಕಾರಿ ನೌಕರರು ಮತ್ತು ಕುಟುಂಬದ ಅವಲಂಬಿತ ಸದಸ್ಯರುಗಳ ಆಧಾರ್ ಸಂಖ್ಯೆಯನ್ನು ಮಾನವ ಸಂಪನ್ಮೂಲ ಯೋಜನ ತಂತ್ರಾಂಶದಲ್ಲಿ ಅಳವಡಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ/46/ಎಸ್.ಎಂ.ಆರ್/2013, ಬೆಂಗಳೂರು, ದಿ. 04-01-2014.
2. ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ/14/ಎಸ್.ಎಂ.ಆರ್/2013 ಬೆಂಗಳೂರು, ದಿ. 18-08-2014.
3. ಸರ್ಕಾರದ ಸುತ್ತೋಲೆ ಸಂಖ್ಯೆ : ಸಿಆಸುಇ/13/ಇಆಇ/2015, ಬೆಂಗಳೂರು, ದಿ. 18-03-2015.
4. ಪತ್ರ ಸಂಖ್ಯೆ DPAR/13/EGM/2015, Bangalore, Dated 7-11-2015.

ಉಲ್ಲೇಖಿತ ಸರ್ಕಾರಿ ಆದೇಶ, ಸುತ್ತೋಲೆಗಳು ಹಾಗೂ ಪತ್ರಗಳೆಡೆಗೆ ಗಮನ ಸೆಳೆಯಲಾಗಿದೆ. ನವೆಂಬರ್ 2015 ರೊಳಗೆ ಎಲ್ಲಾ ಇಲಾಖೆಗಳ ಬಟವಾಡೆ ಅಧಿಕಾರಿಗಳು ತಮ್ಮ ಅಧೀನದ ಸಿಬ್ಬಂದಿಯ ಹಾಗೂ ಅವರ ಕುಟುಂಬ ಸದಸ್ಯರ ಆಧಾರ್ ಸಂಖ್ಯೆಯನ್ನು ಮಾನವ ಸಂಪನ್ಮೂಲ ಯೋಜನೆಯ ತಂತ್ರಾಂಶದಲ್ಲಿ ನೊಂದಾಯಿಸಲು ತಿಳಿಸಲಾಗಿತ್ತು. ಇಲ್ಲಿಯವರೆಗೂ ಸುಮಾರು ಒಂದು ಲಕ್ಷ ಆಧಾರ್ ಸಂಖ್ಯೆಗಳು ನೊಂದಾಯಿಸಲಾಗಿದ್ದು, ಬಾಕಿ ನೌಕರರ ಹಾಗೂ ಕುಟುಂಬ ಸದಸ್ಯರ ಆಧಾರ್ ಸಂಖ್ಯೆ ನೊಂದಾಯಿಸುವುದು ಬಾಕಿ ಉಳಿದಿದೆ. ಇದರಿಂದಾಗಿ "ಜ್ಯೋತಿ ಸಂಜೀವಿನಿ" ಯೋಜನೆಯ ಸಹಾಯ ಪಡೆಯುವಲ್ಲಿ ನೌಕರರು ವಂಚಿತರಾಗುತ್ತಿದ್ದಾರೆ. ಮಾನವ ಸಂಪನ್ಮೂಲ ಯೋಜನೆ ತಂತ್ರಾಂಶದಲ್ಲಿ ನೌಕರರನ್ನು "ಆಧಾರ್" ಸಂಖ್ಯೆ ಮೂಲಕ ಗುರುತಿಸುವ ಪ್ರಯತ್ನಕ್ಕೆ ಹಿನ್ನಡೆಯಾಗುತ್ತಿದೆ.

ಎಲ್ಲಾ ಇಲಾಖಾ ಮುಖ್ಯಸ್ಥರಲ್ಲಿ ತಿಳಿಸುವುದೇನೆಂದರೆ ತಮ್ಮ ಅಧೀನದಲ್ಲಿರುವ ಎಲ್ಲಾ ಬಟವಾಡೆ ಅಧಿಕಾರಿಯವರುಗಳು ಎಲ್ಲಾ ಸರ್ಕಾರಿ ನೌಕರರ ಮತ್ತು ಅವರ ಅವಲಂಬಿತರ ಆಧಾರ್ ಸಂಖ್ಯೆಯನ್ನು ಮಾನವ ಸಂಪನ್ಮೂಲ ಯೋಜನೆಯ ತಂತ್ರಾಂಶದಲ್ಲಿ ಅಳವಡಿಸಲು ಸೂಚಿಸುವುದು. ಈ ಕಾರ್ಯವು ಅಕ್ಟೋಬರ್ 2016 ರೊಳಗೆ ಪೂರ್ಣಗೊಳಿಸಬೇಕು. ಒಂದು ವೇಳೆ ಯಾವುದೇ ಬಟವಾಡೆ ಅಧಿಕಾರಿಯು ವಿಳಂಬ ಮಾಡಿದಲ್ಲಿ ಅಂತಹವರ ನವೆಂಬರ್ 2016 ಮತ್ತು ತದನಂತರ ವೇತನ ಬಿಲ್ ತಯಾರಿಸುವುದು ಸಾಧ್ಯವಾಗದೆ ಇರಬಹುದು. ಹಾಗಾಗಿ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸಂಬಂಧಿತ ಬಟವಾಡೆ ಅಧಿಕಾರಿಗಳ ಗಮನಕ್ಕೆ ತರಲು ಕೋರಲಾಗಿದೆ.

(ವಿ. ಮಂಜುಳ)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಸಿಆಸು ಇಲಾಖೆ (ಇ-ಆಡಳಿತ).

ಪ್ರತಿಯನ್ನು :

1) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
2) ಸರ್ಕಾರದ ಎಲ್ಲಾ ಇಲಾಖೆಗಳ ಮುಖ್ಯಸ್ಥರು,
3) ಸರ್ಕಾರದ ಎಲ್ಲಾ ನಿಗಮ/ಮಂಡಳಿಗಳ ಮುಖ್ಯಸ್ಥರು